# TUX PAINT

## Std – VIII

## Text Editor, Calculator, G Compris, Tux Paint

1. ತರಕಾರಿಗಳಿಗಾಗಿ ಕೇರಳವು ಇತರ ರಾಜ್ಯಗಳನ್ನು ಆಶ್ರಯಿಸಿದೆ. ಹೀಗೆ ಕೇರಳಕ್ಕೆ ಇತರ ರಾಜ್ಯಗಳಿಂದ ಆಮದು ಮಾಡುವ, ಆದರೆ ಕೇರಳದಲ್ಲಿ ಬೆಳೆಸುವುದಕ್ಕೆ ಸಾಧ್ಯವಿರುವ ತರಕಾರಿಗಳ ಚಿತ್ರಗಳನ್ನು ಸೇರಿಸಿ (ಕನಿಷ್ಟ 4) ಒಂದು ಆಲ್ಬಮನ್ನು Tux Paint ತೆರೆದು Stamp Tool ಉಪಯೋಗಿಸಿ ತಯಾರಿಸಿರಿ. ಚಿತ್ರಗಳ ಕೆಳಗೆ "WE SHOULD CULTIVATE THESE VEGETABLES" ಎಂದು ಟೈಪು ಮಾಡಿ ಸೇರಿಸಬೇಕು.

2. ವಿಟಮಿನ್ ಕೊರತೆಯ ಕಾರಣದಿಂದ ಅನಾರೋಗ್ಯ ಪೀಡಿತನಾದ ಒಬ್ಬ ಬಾಲಕನ ಆಹಾರದಲ್ಲಿ ಧಾರಾಳ ಹಣ್ಣುಹಂಪಲುಗಳನ್ನು ಸೇರಿಸಬೇಕೆಂದು ವೈದ್ಯರು ಸೂಚಿಸಿದರು. ಅವನು ಸೇವಿಸಬೇಕಾದ ಹಣ್ಣುಹಂಪಲುಗಳ ಚಿತ್ರಗಳನ್ನು ಸೇರಿಸಿ(ಕನಿಷ್ಟ 4) ಒಂದು ಫ್ರುಟ್ ಆಲ್ಬಮನ್ನು Tux Paint ತೆರೆದು Stamp Tool ಉಪಯೋಗಿಸಿ ತಯಾರಿಸಿರಿ. ಚಿತ್ರಗಳ ಕೆಳಗೆ ಅವುಗಳ ಹೆಸರನ್ನು ಟೈಪು ಮಾಡಿ ಸೇರಿಸಬೇಕು.

3. ಕಾರ್ತಿಕ್ ಅವನ ಕಲಿಕಾ ಚಟುವಟಿಕೆಗಳ ಭಾಗವಾಗಿ ಸೌರವ್ಯೂಹದ 8 ಗ್ರಹಗಳ ಚಿತ್ರಗಳನ್ನು ಒಳಗೊಂಡ ಒಂದು ಚಾರ್ಟನ್ನು ಕೆಳಗಿನಂತೆ Tux Paint ನಲ್ಲಿ ತಯಾರಿಸಿದನು. ಇದೇ ರೀತಿ ಒಂದು ಚಾರ್ಟನ್ನು Tux Paint ಉಪಯೋಗಿಸಿ ನೀವು ತಯಾರಿಸಿರಿ. (ಯಾವುದಾದರೂ 4 ಗ್ರಹಗಳು ಮತ್ತು ಅವುಗಳ ಹೆಸರುಗಳನ್ನು ಚಾರ್ಟನಲ್ಲಿ ಸೇರಿಸಿದರೆ ಸಾಕು.)




4. ಅಕ್ಷರಗಳು ಕೆಳಗೆ ಬೀಳುವ ಮೊದಲು ಅವುಗಳನ್ನು ಟೈಪುಮಾಡಿ ಪಾಯಿಂಟ್ ಗಳಿಸುವ ಒಂದು ಗೇಮ್ ತೆರೆದು ಗರಿಷ್ಟ ಅಂಕಗಳನ್ನು ಪಡೆಯಿರಿ. ಸಮಯ ಮಿತಿ 5 ನಿಮಿಷ ಕೆಳಗಿನ ಸೂಚನೆಯ ಪ್ರಕಾರ ಗೇಮನ್ನು ತೆರೆಯಬಹುದು.
(Application - Education - G compris - Discover the computer - Keyboard Manipulation boards - Simple letters)

5. ಫಿಶ್ ಟಾಂಕಿಯ ಮೀನುಗಳನ್ನು ಕ್ಲಿಕ್ ಮಾಡಿ ಪಾಯಿಂಟ್ ಗಳಿಸುವ ಒಂದು ಗೇಮ್ ತೆರೆದು ಗರಿಷ್ಟ ಅಂಕಗಳನ್ನು ಪಡೆಯಲು ಪ್ರಯತ್ನಿಸಿರಿ. ಸಮಯ ಮಿತಿ 5 ನಿಮಿಷ.
(Application - Education - G compris - Discover the computer - Mouse Manipulation activities - Click on Mouse)

6. ಭತ್ತ ಕೃಷಿಯನ್ನು ಉತ್ತೇಜನಗೊಳಿಸುವ ಭಾಗವಾಗಿ ದೇಲಂಪಾಡಿ ಕೃಷಿಭವನವು ಕಿರಣನ ತಂದೆಗೆ 13,200 ರೂಪಾಯಿಯನ್ನು ಮಂಜೂರು ಮಾಡಿತು. ಈ ಮೊತ್ತದ 1/3 ಭಾಗವನ್ನು ಬೀಜಕ್ಕೂ, 1/2 ಭಾಗವನ್ನು ಗೊಬ್ಬರಕ್ಕೂ 1/6 ಭಾಗವನ್ನು ಕೂಲಿಗೂ ಖರ್ಚು ಮಾಡಿದರು. ಆದರೆ ಪ್ರತಿಯೊಂದಕ್ಕೂ ಎಷ್ಟು ರೂಪಾಯಿ ಖರ್ಚು ಮಾಡಲಾಯಿತು ಎಂಬುದನ್ನು ಕ್ಯಾಲ್ಕುಲೇಟರ್ ಪ್ರೋಗ್ರಾಮ್ ಉಪಯೋಗಿಸಿ ಕಂಡುಹಿಡಿಯಿರಿ.

7. ಗಣಿತ ಶಾಸ್ತ್ರ ಕ್ಲಬ್ಬಿನಲ್ಲಿ ಪ್ರದರ್ಶಿಸುವುದಕ್ಕಾಗಿ ವಿವಿಧ ಜ್ಯಾಮಿತೀಯ ರೂಪಗಳನ್ನು ಹಾಗು ಅವುಗಳ ಹೆಸರುಗಳನ್ನು ಸೇರಿಸಿ Tux Paint-ನಲ್ಲಿ ತಯಾರಿಸಿದ ಚಿತ್ರವನ್ನು ಕೆಳಗೆ ಕೊಡಲಾಗಿದೆ. ಇದೇ ರೀತಿಯ ಒಂದು ಚಿತ್ರವನ್ನು Tux Paint-ಉಪಯೋಗಿಸಿ ತಯಾರಿಸಿರಿ. (ಯಾವುದಾದರೂ 3 ಜ್ಯಾಮಿತೀಯ ರೂಪಗಳನ್ನು ಹಾಗು ಅವುಗಳ ಹೆಸರುಗಳನ್ನು ಸೇರಿಸಿದರೆ ಸಾಕು.)



8. CPU, Monitor, Keyboard, Mouse ಎಂಬಿವುಗಳು ಒಂದು ಕಂಪ್ಯೂಟರಿನ ಪ್ರಧಾನ ಘಟಕಗಳಾಗಿವೆ. ಈ ಪದಗಳನ್ನು ಟೆಕ್ಸ್ಟ್ ಎಡಿಟರ್ ತೆರೆದು ಒಂದೊಂದು ಗೆರೆಗಳಲ್ಲಿ ಟೈಪು ಮಾಡಿ ಸೇರಿಸಿರಿ.
(Application - Accessories - Text Editor)

9. ಸ್ವತಂತ್ರವಾಗಿ ಅರಣ್ಯಗಳಲ್ಲಿ ವಿಹರಿಸಬೇಕಾದ ಪ್ರಾಣಿಗಳನ್ನು ಬಂಧಿಸಿ ಸಾರ್ವಜನಿಕವಾಗಿ ಪ್ರದರ್ಶಿಸಿ ಹಣ ಸಂಪಾದನೆ ಮಾಡುವ ರೀತಿಯನ್ನು ನಾವು ಸರ್ಕಸ್‌ಗಳಲ್ಲಿ ಕಾಣುತ್ತೇವೆ. ಹೀಗೆ ಸರ್ಕಸ್ ಟೆಂಟುಗಳಲ್ಲಿ ಬಂಧನವನ್ನು ಅನುಭವಿಸುವ ಕೆಲವು ಜೀವಿಗಳ ಹೆಸರುಗಳನ್ನು ಸೇರಿಸಿ Tux Paint-ನಲ್ಲಿ ಪದಸೂರ್ಯನನ್ನು ನಿರ್ಮಿಸಿರಿ. ಮಾದರಿಯನ್ನು ಗಮನಿಸಿರಿ.




10. ಪ್ರಕೃತಿಯ ಎಲ್ಲಾ ಜೀವಿಗಳು ಯಾವುದಾದರೂ ರೀತಿಯಲ್ಲಿ ಪರಸ್ಪರ ಹೊಂದಿಕೊಂಡಿವೆ. ಆಹಾರ ಶೃಂಖಲೆಯು ಈ ರೀತಿಯ ಒಂದು ಹೊಂದಾಣಿಕೆಯಾಗಿದೆ. ಇದನ್ನು ಸೂಚಿಸುವ ಒಂದು ಚಿತ್ರವನ್ನು ಕೆಳಗೆ

ಕೊಡಲಾಗಿದೆ. ಇದೇ ರೀತಿ ಆಹಾರ ಶೃಂಖಲೆಯನ್ನು ಸೂಚಿಸುವ ಒಂದು ಚಿತ್ರವನ್ನು ಖ್ಢಿ ಕಿಟ್ಝುಟಿಡಿ–ನಲ್ಲಿ ರಚಿಸಿರಿ.

